ಸದನದಲ್ಲಿ ಉತ್ತರಿಸುವ ಪ್ರಶ್ನೆ

ಕರ್ನಾಟಕ ವಿಧಾನ ಪರಿಷತ್ತು

ನೂರ ನಲವತ್ತೆರಡನೆಯ ಅಧಿವೇಶನ

ಮಂಗಳವಾರ, ದಿನಾಂಕ : 15 ನೇ ಡಿಸೆಂಬರ್, 2020

ಸಹಕಾರ ಇಲಾಖೆಯ ಲೆಕ್ಕ ಪರಿಶೋಧನೆ ಬಗ್ಗೆ

ಶ್ರೀಮತಿ ಭಾರತಿ ಶೆಟ್ಟಿ(ನಾಮನಿರ್ದೇಶನ ಹೊಂದಿದವರು ) –

104 (783) ಸಹಕಾರ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ –

(ಅ) ಸಹಕಾರ ಇಲಾಖೆಯಲ್ಲಿ ಕಳೆದ 3 ವರ್ಷಗಳಲ್ಲಿ ಲೆಕ್ಕ ಪರಿಶೋಧನಾ ಇಲಾಖೆಯು ಸಂಗ್ರಹಿಸಿರುವ ಒಟ್ಟು ಆಡಿಟ್ ಫೀ (ವರ್ಷಾವಾರು) ಮೊತ್ತ ಎಷ್ಟು;

(ಆ) ಆರ್ಥಿಕ ವರ್ಷಗಳಲ್ಲಿ ಇಲಾಖೆಯು ಸಂಬಳ, ಸಾರಿಗೆ ಭತ್ಯೆ ಹಾಗೂ ಇತರೆ ಭತ್ಯೆ ಇತ್ಯಾದಿಗಳಿಗೆ ಖರ್ಚು ಮಾಡಿರುವ ಮೊತ್ತ ಎಷ್ಟು; (ವರ್ಷಾವಾರು ಮಾಹಿತಿ ನೀಡುವುದು)

(ಇ) ಚಾರ್ಟರ್ಡ್ ಆಕೌಂಟೆಂಟ್ ಆಡಿಟ್ ಆದ ಮೇಲೆ ಇಲಾಖೆಯ ಮುಂದಿನ ಕ್ರಮ ಏನು;

(ಈ) ವಾಣಿಜ್ಯ ವಿಷಯದಲ್ಲಿ ಪದವಿ ಹೊಂದಿದವರನ್ನು ಆರ್ಥಿಕ ಇಲಾಖೆ ಸ್ವೀಕರಿಸಲು ಸಿದ್ಧವಿರುವಾಗ, ಇಲಾಖಾ ಸಿಬ್ಬಂದಿ-ಅಧಿಕಾರಿಗಳ ಸೇವೆಯನ್ನು ಮಿಳಿತಗೊಳಿಸಲು ಸರ್ಕಾರ ಯಾವ ರೀತಿ ಕ್ರಮ ಕೈಗೊಳ್ಳಲಿದೆ; (ಹಣಕಾಸಿನ ವರದಿ ಶಿಫಾರಸ್ಸಿನ ಹಿನ್ನಲೆಯಲ್ಲಿ)

(ಉ) ಆರ್ಥಿಕವಾಗಿ ಹೊರೆಯಾಗಿರುವ ಸದರಿ ಇಲಾಖೆ ಬಗ್ಗೆ ತುರ್ತಾದ ತೀರ್ಮಾನಗಳನ್ನು ಮತ್ತೊಮ್ಮೆ ಪರಿಶೀಲಿಸಿ ಕೈಗೊಳ್ಳುವ ಬಗ್ಗೆ ಸರ್ಕಾರದ ಕ್ರಮಗಳೇನು?